# 2023-24 ನೇ ಸಾಲಿನಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಕಡಿಮೆ ವೆಚ್ಚದ ಅಣಬೆ ಉತ್ಪಾದನಾ ಘಟಕ ಕ್ಕೆ ಸಹಾಯಧನ ಕಾರ್ಯಕ್ರಮ

## I. ಅಣಬೆಯ ಪ್ರಾಮುಖ್ಯತೆ:

ಅಣಬೆ ಸಸ್ಯ ವರ್ಗಕ್ಕೆ ಸೇರಿದ ಒಂದು ಸಸ್ಯ. ತಿನ್ನುವ ಅಣಬೆಯನ್ನು ಆಹಾರ ಪದಾರ್ಥಗಳ ಪಟ್ಟಿಯಲ್ಲಿ ತರಕಾರಿ ಪದಾರ್ಥವನ್ನಾಗಿ ಸೇರಿಸಿದೆ. ಅಣಬೆಯು ಮೃದುತ್ವ ಮತ್ತು ವಿವಿಧ ಮಸಾಲೆಯ ಪರಿಮಳವನ್ನು ಅಳವಡಿಸಿಕೊಳ್ಳುವ ಗುಣವನ್ನು ಹೊಂದಿದೆ. ಅಷ್ಟೇ ಅಲ್ಲದೇ ಅಣಬೆಯಲ್ಲಿ ಪ್ರೋಟೀನ್ ಮತ್ತು ಜೀವಸತ್ವಗಳು ಹೇರಳವಾಗಿದ್ದು, ಶರ್ಕರಪಿಷ್ಠ ಕಡಿಮೆ ಇರುವುದರಿಂದ ಸಕ್ಕರೆ ರೋಗಿಗಳಿಗೆ ಇದು ಒಳ್ಳೆಯ ಆಹಾರವಾಗಬಲ್ಲದು. ಅಣಬೆಯನ್ನು ಆಹಾರ ಪದಾರ್ಥಗಳಿಗೆ ಪರ್ಯಾಯವಾಗಿ ಇತ್ತೀಚಿನ ದಿನಗಳಲ್ಲಿ ಬಳಸುತ್ತಿದ್ದು ಹೆಚ್ಚಿನ ಪ್ರಾಮುಖ್ಯತೆ ಪಡೆದಿದೆ. ಇದನ್ನು ವ್ಯವಸಾಯ ಮೂಲದಿಂದ ಬರುವ ತ್ಯಾಜ್ಯವಸ್ತುಗಳ ಸಹಾಯದಿಂದ ಮನೆ ಅಂಗಳದಲ್ಲಿಯೇ ಬೆಳೆಯಬಹುದಾಗಿದ್ದು, ಹೆಚ್ಚಿನ ಭೂಮಿಯ ಅಗತ್ಯತೆ ಇರುವುದಿಲ್ಲ. ಆದ್ದರಿಂದ, ಅತೀ ಕಡಿಮೆ ಜಮೀನು ಇರುವ ಅತೀ ಸಣ್ಣ ರೈತರು ಸಹಾ ಅಣಬೆ ಕೃಷಿಯನ್ನು ಕೈಗೊಳ್ಳಬಹುದು. ಅಣಬೆ ಕೃಷಿಯಿಂದ ಕಡಿಮೆ ವೇಳೆಯಲ್ಲಿ ಮತ್ತು ಅತ್ಯಲ್ಪ ಪ್ರದೇಶದಲ್ಲಿ ಅಧಿಕ ಇಳುವರಿ ಪಡೆಯಬಹುದು. ಹೀಗಾಗಿ ವಿದ್ಯಾವಂತ, ನಿರುದ್ಯೋಗಿ ಯುವಕರಿಗೆ ಮತ್ತು ಮಹಿಳೆಯರಿಗೆ ಅಣಬೆ ಕೃಷಿ ಒಂದು ವರದಾನ. ಅಣಬೆ ಇತರೆ ಸಸ್ಯಗಳಿಗಿಂತ ಭಿನ್ನವಾಗಿದ್ದು, ಪತ್ರಹರಿತ್ತು (Chlorophyll) ನ್ನು ಹೊಂದಿಲ್ಲದ ಕಾರಣ ಸ್ವಯಂ ಆಹಾರವನ್ನು ತಯಾರಿಸಿಕೊಳ್ಳಲು ಸಾಧ್ಯವಿಲ್ಲ. ಆದಕಾರಣ ಅಣಬೆ ಬೇರೊಂದು ವಸ್ತುವಿನ ಆಶ್ರಯವನ್ನು ಪಡೆದು ಬೆಳೆಯುತ್ತದೆ.

ಪ್ರಸ್ತುತ ಭಾರತದಲ್ಲಿ ಅಣಬೆ ಉತ್ಪಾದನೆ ಸುಮಾರು 1.2 ಲಕ್ಷ ಟನ್ ಇದ್ದು, ಇದು ಉತ್ಪಾದನಾ ಬೇಡಿಕೆಗಿಂತ ತುಂಬಾ ಕಡಿಮೆ ಇರುತ್ತದೆ. ಭಾರತ ದೇಶದಲ್ಲಿ ಸುಮಾರು 700 ಮಿಲಿಯನ್ ಟನ್ ಗಳಷ್ಟು ಕೃಷಿ ತ್ಯಾಜ್ಯ ವಸ್ತುಗಳು ಪೋಲಾಗುತ್ತಿದೆ. ಈ ಪ್ರಮಾಣದಲ್ಲಿ ಶೇಕಡಾ 2 ರಷ್ಟು ತ್ಯಾಜ್ಯವನ್ನು ಅಣಬೆ ಉತ್ಪಾದನೆಯಲ್ಲಿ ಬಳಸಿಕೊಂಡರೆ ಸುಮಾರು 15 ಮಿಲಿಯನ್ ಟನ್ ಗಳ ಅಣಬೆ ಉತ್ಪಾದನೆಯನ್ನು ವಾರ್ಷಿಕವಾಗಿ ಬೆಳೆಸಬಹುದು (DMR, "Vision 2050"). ಆರ್ಥಿಕವಾಗಿ ದುರ್ಬಲರಾದ ವರ್ಗಗಳ ಪೋಷಕಾಂಶ ಕೊರತೆ ಮತ್ತು ಸಮಾಜದ ಎಲ್ಲಾ ವರ್ಗದ ಜನರನ್ನು ಆಧುನಿಕ ಜೀವನ ಶೈಲಿಯ ಪರಿಣಾಮವಾಗಿ ಭಾಧಿಸುತ್ತಿರುವ ಶಾರೀರಿಕ ಅಸಮತೋಲನ ಸಂಬಂಧಿತ ಆರೋಗ್ಯ ಸಮಸ್ಯೆಗಳ ನಿವಾರಣೆ/ ನಿರ್ವಹಣೆಯಲ್ಲಿ ಪ್ರಮುಖ ಪಾತ್ರವಹಿಸಲಿದೆ. ಅಲ್ಲದೆ ಇದು ಸುಮಾರು 30 ಲಕ್ಷ ಜನರಿಗೆ ವರ್ಷವಿಡೀ ಉದ್ಯೋಗ ಅವಕಾಶ ಕಲ್ಪಿಸ ಬಲ್ಲದು.

### ಅಣಬೆ ಅಭಿವೃದ್ಧಿ ಯೋಜನೆಯ ಉದ್ದೇಶಗಳು:

1. ಗ್ರಾಮೀಣ ನಗರ ಮತ್ತು ಪಟ್ಟಣ ಪ್ರದೇಶದಲ್ಲಿನ ಜನರಲ್ಲಿ ಅದರಲ್ಲೂ ಮಕ್ಕಳಲ್ಲಿ ಅಣಬೆ ಬೆಳೆಯ ಪೋಷಕಾಂಶಗಳ ಮಹತ್ವದ ಬಗ್ಗೆ ಹೆಚ್ಚಿನ ಅರಿವನ್ನು ಮೂಡಿಸುವ ಮೂಲಕ ಪ್ರತೀ ಕುಟುಂಬದಲ್ಲಿ ಅಣಬೆಯ ಮಹತ್ವ ಮತ್ತು ಅಣಬೆ ಬಳಕೆಗೆ ಬೇಡಿಕೆಯನ್ನು ಸೃಜಿಸುವುದು.
2. ಅಣಬೆ ಉತ್ಪಾದನೆ ಮತ್ತು ಬಳಕೆ ಕ್ಷೇತ್ರದ ಸಂಪೂರ್ಣ ಉಪಯೋಗ ಪಡೆಯಲು ಪ್ರಮುಖವಾಗಿ ಮೂರು ಅಂಶಗಳ ಮೇಲೆ ಗಮನಹರಿಸುವುದು ಅಗತ್ಯವಿರುತ್ತದೆ. ಅವುಗಳೆಂದರೆ,
   i. ಅಣಬೆಯ ಪೋಷಕಾಂಶದ ಮಹತ್ವ ಕುರಿತು ಅರಿವು ಮೂಡಿಸುವುದು

ii. ಸಮಾಜದ ಕೆಲವು ಭಾಗಗಳಲ್ಲಿ ಅಣಬೆ ಬಳಕೆಯ ಮೂಢನಂಬಿಕೆಗಳನ್ನು ಹೋಗಲಾಡಿಸುವುದು.

iii. ಗುಣಮಟ್ಟದ ಬೀಜ ನಿರಂತರವಾಗಿ ಉತ್ಪಾದಕರಿಗೆ ಲಭ್ಯವಾಗುವಂತೆ ಮಾಡುವುದು.

3. ಗ್ರಾಮೀಣ ನಗರ ಮತ್ತು ಪಟ್ಟಣ ಪ್ರದೇಶದಲ್ಲಿನ ಜನರಲ್ಲಿ ವಾರ್ಷಿಕ ಸರಾಸರಿ ಅಣಬೆ ಬಳಕೆಯನ್ನು ವ್ಯವಸ್ಥಿತ ಮಾಹಿತಿ ಶಿಬಿರ ಮತ್ತು ಪ್ರಾತ್ಯಕ್ಷಿಕೆಗಳ ಮೂಲಕ ಹೆಚ್ಚಿಸಿ ಪೋಷಕಾಂಶಗಳ ಕೊರತೆಯನ್ನು ಕಡಿಮೆಗೊಳಿಸಿ ಜನರ ನೈಜ ಆರೋಗ್ಯಮಟ್ಟವನ್ನು ಸುಧಾರಿಸುವುದು.

4. ಗ್ರಾಮೀಣ ಮಹಿಳೆಯರು ಹಾಗೂ ಸ್ವಸಹಾಯ ಗುಂಪುಗಳ ಸದಸ್ಯರು ಸ್ವತಃ ಉತ್ಪಾದಿಸಿದ ಅಣಬೆಯನ್ನು ವಾರದಲ್ಲಿ ಕನಿಷ್ಠ ಒಂದರಿಂದ ಎರಡು ದಿವಸ ಆಹಾರದಲ್ಲಿ ಬಳಸಲು ಪ್ರೇರೇಪಿಸುವುದು.

5. ಕೃಷಿ ಕ್ಷೇತ್ರದಲ್ಲಿ ಉತ್ಪಾದನೆಯಾಗುವ ಹೇರಳ ಪ್ರಮಾಣದ ಕೃಷಿ ತ್ಯಾಜ್ಯವನ್ನು ಸುಡುವ ಪರಿಪಾಠವಿರುವುದರಿಂದ, ಅಮೂಲ್ಯ ಸಾವಯವ ಗೊಬ್ಬರ/ಪೋಷಕಾಂಶ ಪೋಲಾಗುತ್ತಿರುವುದಲ್ಲದೇ, ಪರಿಸರ ಮಾಲಿನ್ಯಕ್ಕೂ ಕಾರಣವಾಗುತ್ತಿದೆ. ಈ ಕೃಷಿ ತ್ಯಾಜ್ಯವನ್ನು ಅಣಬೆ ಉತ್ಪಾದನೆಗೆ ಬಳಸಿಕೊಂಡು, ಸಮಾಜದ ಆರ್ಥಿಕವಾಗಿ ಕೆಳಸ್ಥರದಲ್ಲಿರುವ ಜನರ ಪೋಷಕಾಂಶ ಅದರಲ್ಲೂ ವಿಶೇಷವಾಗಿ ಪ್ರೋಟಿನ್ ಕೊರತೆ ನೀಗಿಸುವಲ್ಲಿ ಕ್ರಮವಹಿಸುವುದು.

6. ಜನಸಾಮಾನ್ಯರು ಅಣಬೆ ಉತ್ಪಾದಿಸಲು ಅನುವಾಗುವಂತೆ, ಅಗತ್ಯ ವಿದಿವಿದಾನಗಳನ್ನು ಮತ್ತು ಅಣಬೆ ಬಳಕೆಯ ರೀತಿಯನ್ನು ತರಬೇತಿ/ಪ್ರಾತ್ಯಕ್ಷಿಕೆಗಳ ಮೂಲಕ ಮನವರಿಕೆ ಮಾಡಿಕೊಡುವುದು.

7. ಅಣಬೆ ಬೀಜ ಮತ್ತು ಬೆಳೆ ಉತ್ಪಾದನೆ, ಕೊಯ್ಲೋತ್ತರ ನಿರ್ವಹಣೆ, ಸಂಸ್ಕರಣೆ, ವಿವಿಧ ಉತ್ಪನ್ನಗಳ ತಯಾರಿಕೆ, ಮತ್ತು ಮಾರುಕಟ್ಟೆ ಇವುಗಳ ಸಂಬಂಧ ಕೃಷಿಕರು ಯೋಜನೆ ರೂಪಿಸಿ, ಅನುಷ್ಠಾನಿಸಲು ಅಗತ್ಯ ಮಾರ್ಗದರ್ಶನ ಮತ್ತು ವಿವಿಧ ಯೋಜನೆಗಳಡಿ ಸವಲತ್ತು ಪಡೆಯುವ ನಿಟ್ಟಿನಲ್ಲಿ ಕಾರ್ಯತತ್ಪರರಾಗುವುದು.

**ಸಮಗ್ರ ತೋಟಗಾರಿಕೆ ಅಭಿವೃದ್ಧಿ (CHD) ಯೋಜನೆಯಡಿ ಕಡಿಮೆ ವೆಚ್ಚದ ಅಣಬೆ ಘಟಕಗಳಿಗೆ ಬೇಡಿಕೆ:**

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಅಡಿಯಲ್ಲಿ ಅಣಬೆ ಉತ್ಪಾದನಾ ಘಟಕ ನಿರ್ಮಾಣಕ್ಕೆ ಸಹಾಯಧನ ಪಡೆಯಲು ಫಲಾನುಭವಿಯು ಕಡ್ಡಾಯವಾಗಿ ಕಟ್ಟಡ ನಿರ್ಮಾಣ ಮಾಡಿಕೊಳ್ಳಬೇಕಾಗಿರುತ್ತದೆ. ಇದಕ್ಕೆ ಹೆಚ್ಚು ಅನುದಾನ ಬೇಕಾಗುವುದರಿಂದ ಮತ್ತು ಸಹಾಯಧನ ಪಡೆಯಲು ಬ್ಯಾಂಕ್ ಸಾಲ ಕಡ್ಡಾಯವಾದ್ದರಿಂದ, ರೈತರು ಮತ್ತು ಸಾರ್ವಜನಿಕರು ವಿವಿಧ ವೇದಿಕೆ/ ಸಂದರ್ಭಗಳಲ್ಲಿ ಹಾಗೂ ಇಲಾಖೆಯ ಕೆಲವು ಅಧಿಕಾರಿಗಳು ಕಡಿಮೆ ವೆಚ್ಚದ ಸಣ್ಣ ಘಟಕಗಳಿಗೆಅವಕಾಶ ಕಲ್ಪಿಸಿಕೊಟ್ಟಲ್ಲಿ ಅಣಬೆ ಉತ್ಪಾದನೆ ಚುರುಕುಗೊಳ್ಳಬಲ್ಲದು ಎಂಬ ವಿಷಯವನ್ನು ಪ್ರಸ್ಥಾಪಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, 2018-19 ನೇ ಸಾಲಿನಿಂದ ಸಮಗ್ರ ತೋಟಗಾರಿಕೆ ಅಭಿವೃದ್ಧಿ (CHD) ಯೋಜನೆದಡಿ ಕಡಿಮೆ ವೆಚ್ಚದ ಅಣಬೆ ಉತ್ಪಾದನಾ ಘಟಕಗಳನ್ನು ಅಭಿವೃದ್ಧಿ ಪಡಿಸುವ ಫಲಾನುಭವಿಗಳಿಗೆ ಸಹಾಯಧನ ನೀಡಲು ಪ್ರಾರಂಭಿಸಲಾಯಿತು.

## II. 2023-24 ನೇ ಸಾಲಿನ ಅಣಬೆ ಅಭಿವೃದ್ಧಿ ಯೋಜನೆ:

### a. ಮಿಲ್ಕಿ ಅಣಬೆಯ ಕೊಠಡಿಯ ವಿವರ:

ಮಿಲ್ಕಿ ಅಣಬೆ ಬೆಳವಣಿಗೆಗೆ 28-35°C ತಾಪಮಾನ, ಸಾಪೇಕ್ಷ ಅರ್ದತೆ (RH) ಸುಮಾರು 85%, ಬೆಳವಣಿಗೆ ಕೊಠಡಿಯಲ್ಲಿ 5 ರಿಂದ 6 ಘಂಟೆ ಬೆಳಕು, ಸಾಕಷ್ಟು ಗಾಳಿಯಾಡುತ್ತಿರಬೇಕು. ಬೆಳವಣಿಗೆ ಕೊಠಡಿಗೆ 40 mm ಅಳತೆಯುಳ್ಳ ಕೀಟ ಪರದೆ (Insect proof mesh) ಉಪಯೋಗಿಸತಕ್ಕದ್ದು.ಇದಕ್ಕಾಗಿ ಮಿಲ್ಕಿ ಅಣಬೆಯ ಬೆಳವಣಿಗೆಗೆ ನೀಲಿ ಬಣ್ಣದ ಸಿಲ್ ಪೌಲಿನ್ ಉಪಯೋಗಿಸಿ ಬೆಳವಣಿಗೆ ಕೊಠಡಿ / ಪಾಲಿಹೌಸ್ ಕಟ್ಟಡದ ನಿರ್ಮಾಣ ಮಾಡತಕ್ಕದ್ದು, ಈ ಕಟ್ಟಡವು 3 ಅಡಿ ರಷ್ಟು ಆಳವುಳ್ಳದ್ದಾಗಿರಬೇಕು. ಕಟ್ಟಡದ ನಕ್ಷೆಯು ಈ ಕೆಳಕಂಡಂತಿರುತ್ತದೆ.










**b. ಚಿಪ್ಪು ಅಣಬೆಯ ಕೊಠಡಿಯ ವಿವರ:**

ಚಿಪ್ಪು ಅಣಬೆಯ ಬೆಳವಣಿಗೆಗೆ 20-30°C ತಾಪಮಾನ, ಸಾಪೇಕ್ಷ ಅರ್ದತೆ (RH) ಸುಮಾರು 85%, ಬೆಳವಣಿಗೆ ಕೊಠಡಿಯಲ್ಲಿ 3 ರಿಂದ 4 ಘಂಟೆ ಬೆಳಕು, ಸಾಕಷ್ಟು ಗಾಳಿಯಾಡುತ್ತಿರಬೇಕು. ಬೆಳವಣಿಗೆ ಕೊಠಡಿಗೆ 40 mm ಅಳತೆಯುಳ್ಳ ಕೀಟ ಪರದೆ (Insect proof mesh) ಉಪಯೋಗಿಸತಕ್ಕದ್ದು. ಇದಕ್ಕಾಗಿ ಚಿಪ್ಪು ಅಣಬೆಯ ಬೆಳವಣಿಗೆಯ ಕಟ್ಟಡದ ನಿರ್ಮಾಣ ಮಾಡತಕ್ಕದ್ದು, ಕಟ್ಟಡದ ನಕ್ಷೆಯು ಈ ಕೆಳಕಂಡಂತಿರುತ್ತದೆ.












**ಯೋಜನೆಯ ಘಟಕಗಳು:**

## III. ಫಲಾನುಭವಿಗಳ ಮನೆ/ಕಟ್ಟಡದಲ್ಲಿ ಸಣ್ಣ ಪ್ರಮಾಣದ ಅಣಬೆ ಉತ್ಪಾದನಾ ಘಟಕದ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಸಹಾಯಧನ

ರೈತರ / ಫಲಾನುಭವಿಗಳ ಜಾಗದಲ್ಲಿ ಹಾಲಿ ಇರುವ ಕಟ್ಟಡಗಳಲ್ಲಿ (ಬಳಸದೆ ಇರುವ ಗೊಡಾನ್, ಫಾರಂ ಹೌಸ್, ಶೆಡ್, ಪಡಸಾಲೆ, ರೇಷ್ಮೆ ಮನೆ, ಬಳಸದೇಯಿರುವ ಕೊಟ್ಟಿಗೆ, ಹಳೇ ಮನೆ, ಇತ್ಯಾದಿ) ಅಣಬೆ ಉತ್ಪಾದನೆಗೆ ಬೇಕಾಗುವ ಮೂಲಭೂತ ಸೌಲಭ್ಯಗಳನ್ನು ನಿರ್ಮಿಸಿಕೊಳ್ಳಲು ಸಹಾಯಧನ ನೀಡಿದಲ್ಲಿ ಅಣಬೆ ಬೆಳೆ ಉತ್ಪಾದನೆ ಕೈಗೊಳ್ಳಲು ಆಸಕ್ತರಾಗಿರುವುದಾಗಿ ಇಲಾಖೆಯಿಂದ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಕ್ರಮಗಳಲ್ಲಿ ಅನಿಸಿಕೆ ವ್ಯಕ್ತಪಡಿಸಿರುತ್ತಾರೆ. ಫಲಾನುಭವಿಗಳ ಜಾಗದಲ್ಲಿ ಹಾಲಿ ಇರುವ ಕಟ್ಟಡಗಳಲ್ಲಿ ಅಂದರೆ, ಬಳಸದೆ ಇರುವ ಗೊಡಾನ್, ಫಾರಂ ಹೌಸ್, ಶೆಡ್, ಪಡಸಾಲೆ, ರೇಷ್ಮೆ ಮನೆ, ಬಳಸದೇಯಿರುವ ಕೊಟ್ಟಿಗೆ, ಹಳೇ ಮನೆ, ಇತ್ಯಾದಿ ಸ್ವಚ್ಛ ಕಟ್ಟಡದಲ್ಲಿ ಅಣಬೆ ಘಟಕಕ್ಕೆ ಅಗತ್ಯ ಮೂಲಭೂತ ಸೌಕರ್ಯವನ್ನು ಅಭಿವೃದ್ಧಿ ಪಡಿಸಿ, ಅಣಬೆ ಉತ್ಪಾದನೆ ಮಾಡಬಹುದಾಗಿರುತ್ತದೆ

**A. ಲಭ್ಯವಿರುವ ಕಟ್ಟಡದಲ್ಲಿ ಅಣಬೆ ಉತ್ಪಾದನೆಗೆ ಅವಶ್ಯವಾದ ಪ್ರಮುಖ ಕೊಠಡಿ ಘಟಕಗಳು:**

i. ಮಾಧ್ಯಮ (substrate) ತಯಾರಿ ಘಟಕ
ii. ನಿರ್ಜೀವಿಕರಣ ಕೊಠಡಿ (Sterilization).
iii. ಅಣಬೆ ಬೀಜ ಬಿತ್ತನೆ ಕೊಠಡಿ
iv. ಸ್ಪಾನ್ ರನ್ನಿಂಗ್ ರೂಂ
v. ಬೆಳೆ ಉತ್ಪಾದನೆ ಕೊಠಡಿ (cropping room)

ಇವುಗಳಿಗೆ ಸೂಕ್ತ ಆಂತರಿಕ ವಿನ್ಯಾಸ ದ ಮೂಲಕ ಅವಕಾಶ ಕಲ್ಪಿಸಿಕೊಳ್ಳಬೇಕು. ಕಟ್ಟಡದ ಸುತ್ತಾ/ ಪಕ್ಕದಲ್ಲಿ ಹುಲ್ಲು ಶೇಖರಿಸಲು / ಕತ್ತರಿಸಲು/ ನೆನೆಸಲು ಸ್ಥಳಾವಕಾಶ ಇರಬೇಕು. ಕಟ್ಟಡಕ್ಕೆ ಅವಶ್ಯವಾದ ವಿದ್ಯುತ್ ಶಕ್ತಿ ಮತ್ತು ನೀರಿನ ವ್ಯವಸ್ಥೆ ಇರಬೇಕು.

**B. ಅಗತ್ಯವಾಗಿ ಬೇಕಾದ ಮೂಲಭೂತ ಸೌಕರ್ಯಗಳು (ಕನಿಷ್ಟ 800 ಚ.ಡಿ ರಿಂದ 1200 ಚ.ಡಿ. ವಿಸ್ತೀರ್ಣ ಹೊಂದಿರುವ ಕಟ್ಟಡದಲ್ಲಿ)**

i. ಫ್ಯಾಬ್ರಿಕೇಷನ್ (Fabrication),
ii. ಕಿಟಕಿ ಬಾಗಿಲುಗಳಿಗೆ ಕೀಟ ನಿರೋಧಕ ನೈಲಾನ್ ನೆಟ್,
iii. ಅಣಬೆ ಬೆಳೆ ಬೆಳೆಸಲು ಅಗತ್ಯವಾದ RTF ಬ್ಯಾಗ್ ಗಳನ್ನು ಜೋಡಿಸಲು/ ನೇತು ಹಾಕಲು ಪ್ಲಾಸ್ಟಿಕ್ ಹಗ್ಗದ ವ್ಯವಸ್ಥೆ,
iv. ಯಂತ್ರೋಪಕರಣಗಳು (ಥರ್ಮೋಮೀಟರ್, ತೇವಾಂಶ ಸೃಜಕ, ಆಟೋಕ್ಲೇವ್),
v. ನೀರಿನ ಟ್ಯಾಂಕ್, ನೀರು ಸ್ಪ್ರಿಂಕ್ಲರ್ ವ್ಯವಸ್ಥೆ,
vi. ಕೊಯ್ಲು ಮಾಡುವ ಉಪಕರಣಗಳು, ಟ್ರೇ, ಪ್ಲಾಸ್ಟಿಕ್ ಕವರ್, ಕ್ರೇಟ್ಸ್, ಇತ್ಯಾದಿ. ಘಟಕ ವೆಚ್ಚ ಹೆಚ್ಚಾದಲ್ಲಿ, ಫಲಾನುಭವಿ ಹೆಚ್ಚುವರಿ ವೆಚ್ಚವನ್ನು ಭರಿಸುವುದು.

C. ಘಟಕವಾರು ವೆಚ್ಚದ ವಿವರಗಳು:

**ಒಟ್ಟು ಘಟಕ ವೆಚ್ಚ ರೂ.3.50 ಲಕ್ಷ, ಸಹಾಯಧನದ ಪ್ರಮಾಣ (50%) ರೂ.1.75 ಲಕ್ಷ**

| | ಘಟಕಗಳು | ರೂ. ಗಳಲ್ಲಿ |
|---|---|---|
| I. | Fabrication Works | |
| 1 | ಕಟ್ಟಡದ ಒಳಗೆ Fabrication ಗೆ ಬೇಕಾಗುವ ಪರಿಕರ<br>a. 40 ಸಂಖ್ಯೆ (6ಮೀ ಉದ್ದದ) 1.5 Inch round / square pipe<br>b. 40 ಸಂಖ್ಯೆ 3X3 inch square flats<br>c. 40 ಸಂಖ್ಯೆ 2 inch round pipe cut pieces | Rs. 70,000 |
| 2 | Insect proof nylon net to cover windows / ventilation and other open spaces including labor charges for fixing | Rs. 15,000 |
| 3 | a. Plastic rope (8620 mts)<br>b. Poly propylene covers (Min. 150 micron)<br>c. Paddy straw, spawns & other miscellaneous expenses. | Rs. 35,000<br>Rs. 10,000<br>Rs. 17,500 |
| II. | Sterilization of Substrate | |
| 1 | Sterilization mechanism including electrification (Autoclave of minimum 100 ltrs) - Mandatory | Rs.1,25,000 |
| III. | Machineries and tools required | |
| 1 | a. Humidifying system includes ½ HP motors, Thermo Hygrometer mobility sensor device, 30 nos pipes, sprinklers, fittings, overhead tank, and gunnybags etc,.<br>b. Choppers and accessories for straw preparation | Rs. 30,000<br>Rs.22,500 |
| IV. | Post Harvest Management | |
| 1 | Harvesting tools, trays, crates, packing and weighing machine and packing covers | Rs. 20,000 |
| V. | Other necessary accessories and inputs | Rs. 5000 |
| VI. | Note: Utilisation of Solar Water Heater in Mushroom Production can be encouraged as fuel saving (Eco friendly activity) | - |
| | **Total** | **3,50,000** |

**ಗಮನಿಸಬೇಕಾದ ಅಂಶಗಳು:**

1. ಕ್ರ.ಸಂ: I ರಿಂದ VI ರವರೆಗೆ ಎಲ್ಲಾ ಘಟಕಗಳನ್ನು ಅಳವಡಿಸಿದಲ್ಲಿ, ಯೋಜನಾ ವೆಚ್ಚ 3.50 ಲಕ್ಷ ವಾಗಲಿದ್ದು, ಸಹಾಯಧನದ ಮೊತ್ತ ಗರಿಷ್ಠ 1.75 ಲಕ್ಷ (ಪ್ರತಿ ಘಟಕ್ಕೆ ಶೇ.50 ರಂತೆ ) ನೀಡಲಾಗುತ್ತದೆ.
2. ಸ್ಥಳೀಯ ಅವಶ್ಯಕತೆಗನುಗುಣವಾಗಿ ಪ್ರತಿ ಘಟಕದ ವೆಚ್ಚವನ್ನು 10-15% ವ್ಯತ್ಯಾಸ ಮಾಡಿಕೊಳ್ಳಲು ಅವಕಾಶವಿದ್ದು, ಒಟ್ಟಾರೆ ಎಲ್ಲಾ ಘಟಕಗಳ ಯೋಜನಾ ವೆಚ್ಚ ರೂ.3.50 ಲಕ್ಷದ ಮಿತಿಯೊಳಗಿರಬೇಕು. ಅಂದರೆ, ಘಟಕಗಳ ನಡುವಿನ ವೆಚ್ಚವನ್ನು 10-15% ವ್ಯತ್ಯಾಸಗೊಳಿಸಲು ಅವಕಾಶವಿರುತ್ತದೆ. ಇದು ತೋಟಗಾರಿಕೆ ಉಪ ನಿರ್ದೇಶಕರು ನೀಡುವ ಸಮರ್ಥನೆಯನ್ನಾಧರಿಸಿರುತ್ತದೆ.

3. ಕ್ರ.ಸಂ: I ರಿಂದ VI ರವರೆಗಿನ ಎಲ್ಲಾ ಘಟಕಗಳನ್ನು ಕಡ್ಡಾಯವಾಗಿ ಅನುಷ್ಠಾನಿಸತಕ್ಕದ್ದು.
4. ಬ್ಯಾಂಕ್ ಸಾಲ ಕಡ್ಡಾಯವಾಗಿರುವುದಿಲ್ಲ.
5. ಅಣಬೆ ಘಟಕ ನಿರ್ಮಿಸಲು ಫಲಾನುಭವಿಯ ಹೆಸರಿನಲ್ಲಿ ಸ್ವಂತ ಜಮೀನಿರಬೇಕು.
6. ಮೂರು ಕಟಾವು ಆದನಂತರ ಅಣಬೆಯ ಉಳಿಕೆಯನ್ನು ಎರೆಹುಳು ಘಟಕ್ಕೆ ಉಪಯೋಗಿಸಬಹುದು
7. ನವೀನ ವಿನ್ಯಾಸಗಳಿಗೆ (innovative designs) ಉತ್ತೇಜನ ನೀಡಲಾಗುವುದು.
8. I ರಿಂದ VI ರ ಕೆಲವು ಘಟಕಗಳು ಈಗಾಗಲೇ ಫಲಾನುಭವಿಗಳ ಲಭ್ಯವಿದ್ದಲ್ಲಿ ಅಥವಾ ಅವಶ್ಯಕತೆ ಇರದಿದ್ದಲ್ಲಿ ಅವುಗಳ ವೆಚ್ಚವನ್ನು ಕಡಿತಗೊಳಿಸುವುದು ಮತ್ತು ಅನುಮೋದನೆಗೊಂಡ ಘಟಕಗಳಿಗೆ ಸಹಾಯಧನ ಪಾವತಿಸುವುದು.

## IV. ಆರ್ಥಿಕ ಮತ್ತು ಭೌತಿಕ ಗುರಿ:

### ಅನುಬಂಧ-01

2023-24 ನೇ ಸಾಲಿನಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ (ಎಸ್-07) ಯೋಜನೆಯಡಿ "ಕಡಿಮೆ ವೆಚ್ಚದ ಅಣಬೆ ಉತ್ಪಾದನಾ ಘಟಕಗಳಿಗೆ ಸಹಾಯಧನ" ಕಾರ್ಯಕ್ರಮಕ್ಕೆ ಉಪ-ಶೀರ್ಷಿಕೆ 106, 422 ಮತ್ತು 423 ಅಡಿ ಜಿಲ್ಲಾವಾರು ಹಂಚಿಕೆ

**(ರೂ.ಲಕ್ಷಗಳಲ್ಲಿ)**

| ಕ್ರ.ಸಂ. | ಜಿಲ್ಲೆಗಳು | ಭೌತಿಕ | | | | ಆರ್ಥಿಕ (ರೂ. ಲಕ್ಷಗಳಲ್ಲಿ) | | | |
|---|---|---|---|---|---|---|---|---|---|
| | | 106 | 422 | 423 | Total | 106 | 422 | 423 | Total |
| 1 | ಬೆಂಗಳೂರು ನಗರ | 1 | 0 | 0 | 1 | 1.75 | 0.00 | 0.00 | 1.75 |
| 2 | ಚಿಕ್ಕಮಗಳೂರು | 1 | 1 | 1 | 3 | 1.75 | 1.75 | 1.75 | 5.25 |
| 3 | ದಕ್ಷಿಣ ಕನ್ನಡ | 2 | 0 | 0 | 2 | 3.50 | 0.00 | 0.00 | 3.50 |
| 4 | ಧಾರವಾಡ | 1 | 0 | 0 | 1 | 1.75 | 0.00 | 0.00 | 1.75 |
| 5 | ಕೊಪ್ಪಳ | 1 | 0 | 0 | 1 | 1.75 | 0.00 | 0.00 | 1.75 |
| 6 | ಮೈಸೂರು | 0 | 1 | 0 | 1 | 0.00 | 1.75 | 0.00 | 1.75 |
| 7 | ಉಡುಪಿ | 2 | 0 | 1 | 3 | 3.50 | 0.00 | 1.75 | 5.25 |
| 8 | ಉತ್ತರ ಕನ್ನಡ | 1 | 0 | 0 | 1 | 1.75 | 0.00 | 0.00 | 1.75 |
| 9 | ಯಾದಗಿರಿ | 1 | 0 | 0 | 1 | 1.75 | 0.00 | 0.00 | 1.75 |
| 10 | ನಿರ್ದೇಶನಾಲಯದಲ್ಲಿ ಕಾಯದಿರಿಸಿದೆ | 0 | 1 | 0 | 1 | 0 | 1.75 | 0 | 1.75 |
| | ಒಟ್ಟು | 10 | 3 | 2 | **15** | 17.50 | 5.25 | 3.50 | **26.25** |

**(ರೂ.ಲಕ್ಷಗಳಲ್ಲಿ)**

| "ಕಡಿಮೆ ವೆಚ್ಚದ ಅಣಬೆ ಉತ್ಪಾದನಾ ಘಟಕಗಳಿಗೆ ಸಹಾಯಧನ" ಕಾರ್ಯಕ್ರಮಕ್ಕೆ ಉಪ-ಶೀರ್ಷಿಕೆವಾರು ಹಂಚಿಕೆ | | | |
|---|---|---|---|
| ಕ್ರ.ಸಂ. | ಉಪ-ಶೀರ್ಷಿಕೆ | ಅನುದಾನ (ರೂ.ಲಕ್ಷಗಳಲ್ಲಿ) | ಭೌತಿಕ |
| 1 | 106 | 17.50 | 10 |
| 2 | 422 | 5.25 | 3 |
| 3 | 423 | 3.50 | 2 |
| ಒಟ್ಟು | | ರೂ. 26.25 ಲಕ್ಷ | 15 |

## V. ಅನುಷ್ಠಾನ ಕ್ರಮಗಳು:

1. ಫಲಾನುಭವಿಯ ಆಯ್ಕೆ: ಯೋಜನೆಯ ಕುರಿತು ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ನೀಡಿ ಅರ್ಜಿಗಳನ್ನು ಆಹ್ವಾನಿಸುವುದು. ಅಣಬೆ ಉತ್ಪಾದನೆಯಲ್ಲಿ ಆಸಕ್ತಿ ಹೊಂದಿರುವ, ಕ್ಷೇತ್ರದಲ್ಲಿ ತಿಳುವಳಿಕೆ ಹೊಂದಿರುವ ಮತ್ತು ಉದ್ಯಮಶೀಲ ಮನೋಭಾವ ಹೊಂದಿರುವ ರೈತರು / ಸಾರ್ವಜನಿಕ ಫಲಾನುಭವಿಯನ್ನು ಆಯ್ಕೆ ಮಾಡುವುದು. ಈ ಪ್ರಕ್ರಿಯೆಯನ್ನು **ಸೆಪ್ಟೆಂಬರ್ ಎರಡನೆ ವಾರದೊಳಗೆ** ಪೂರ್ಣಗೊಳಿಸುವುದು.
2. ಒಂದು ವಾರ ಕೌಶಲ್ಯಾಭಿವೃದ್ಧಿ ತರಬೇತಿ ಪಡೆದ ಅಭ್ಯರ್ಥಿಗಳ ವಿವರಗಳನ್ನು ಜೈವಿಕ ಕೇಂದ್ರಗಳ ಅಣಬೆ ವಿಭಾಗದ ವತಿಯಿಂದ ಪಡೆಯಬಹುದಾಗಿರುತ್ತದೆ.
3. ಮಾರ್ಗಸೂಚಿಯನ್ವಯ ಮತ್ತು ಸ್ಥಳ / ಫಲಾನುಭವಿಯ ಅವಶ್ಯಕತೆಯನ್ನಾಧರಿಸಿ, ಯೋಜನಾ ನಕ್ಷೆ ವಿನ್ಯಾಸ ಮತ್ತು ಯೋಜನಾ ವರದಿಯನ್ನು ಫಲಾನುಭವಿ ಸಿದ್ದಪಡಿಸುವುದು. ಇದಕ್ಕೆ ಅಗತ್ಯವಾದ ಮಾರ್ಗದರ್ಶನವನ್ನು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಫಲಾನುಭವಿಗೆ ನೀಡುವುದು. ಯೋಜನಾ ವರದಿಯನ್ನು ಫಲಾನುಭವಿಯು **ಸೆಪ್ಟೆಂಬರ್ ನಾಲ್ಕನೆ ವಾರದೊಳಗೆ** ತಾಲ್ಲೂಕು ತೋಟಗಾರಿಕೆ ಅಧಿಕಾರಿ ರವರ ಮೂಲಕ ಜಿಲ್ಲಾ ತೋಟಗಾರಿಕೆ ಕಛೇರಿಗೆ ಸಲ್ಲಿಸುವುದು.
4. ಆಯ್ಕೆಯಾದ ಫಲಾನುಭವಿಗೆ **ಅಕ್ಟೋಬರ್ ಎರಡನೇ ವಾರದ ಅಂತ್ಯದೊಳಗೆ** ತೋಟಗಾರಿಕೆ ಉಪ ನಿರ್ದೇಶಕರು ಕಾರ್ಯಾದೇಶ ನೀಡುವುದು. ಯೋಜನೆಯ ಮಾರ್ಗಸೂಚಿಯಂತೆ, ಫಲಾನುಭವಿಗಳು ಅಣಬೆ ಘಟಕವನ್ನು **ನವೆಂಬರ್ ಎರಡನೇ ವಾರದೊಳಗೆ** ಪೂರ್ಣಗೊಳಿಸುವುದು.
5. ಘಟಕಕ್ಕೆ ಸಂಬಂಧಪಟ್ಟ ಕಾಮಗಾರಿ, ಯಂತ್ರೋಪಕರಣಗಳು / ಪರಿಕರಗಳ ಖರೀದಿ, ಇತ್ಯಾದಿ ವೆಚ್ಚಗಳ ಬಿಲ್ಲುಗಳನ್ನು ಫಲಾನುಭವಿ ನಿರ್ವಹಿಸಿ, ಪ್ರಸ್ತಾವನೆಯೊಂದಿಗೆ ತಾಲ್ಲೂಕು ತೋಟಗಾರಿಕೆ ಕಛೇರಿಗೆ/ಸಹಾಯಕ ತೋಟಗಾರಿಕೆ ಅಧಿಕಾರಿ ಕಛೇರಿಗೆ **ನವೆಂಬರ್ ಅಂತ್ಯದೊಳಗೆ** ಸಲ್ಲಿಸುವುದು. ಸಹಾಯಕ ತೋಟಗಾರಿಕೆ ಅಧಿಕಾರಿಗಳು/ ತಾಲ್ಲೂಕು ಮಟ್ಟದ ಅನುಷ್ಠಾನ ಅಧಿಕಾರಿಗಳು ಫಲಾನುಭವಿ ಸಲ್ಲಿಸಿರುವ ದಾಖಲಾತಿಗಳನ್ನು ಮಾರ್ಗಸೂಚಿ ಅನ್ವಯ ಹಾಗೂ ನಿಯಮಾನುಸಾರ ಪರಿಶೀಲಿಸಿ ಮೇಲಾಧಿಕಾರಿ/ತೋಟಗಾರಿಕೆ ಉಪನಿರ್ದೇಶಕರಿಗೆ ಸಲ್ಲಿಸುವುದು.
6. ಅನುಷ್ಠಾನಕ್ಕೆ ಮುನ್ನ, ಅನುಷ್ಠಾನ ಹಂತ ಮತ್ತು ಅನುಷ್ಠಾನ ಪೂರ್ಣಗೊಂಡ ನಂತರದ ಮೂರು ಹಂತದ GPS ಫೋಟೋ ತೆಗೆದು ನಿರ್ವಹಿಸುವುದು.
7. ತೋಟಗಾರಿಕೆ ಉಪ ನಿರ್ದೇಶಕರ ನೇತೃತ್ವದ ತಾಲ್ಲೂಕು ಮತ್ತು ಹೋಬಳಿ ಅಧಿಕಾರಿಗಳು ಹಾಗೂ ಸಮೀಪದ ಕೃಷಿ ವಿಶ್ವವಿದ್ಯಾನಿಲಯ/ KVK/ ARS/ HRS/ RRS/ಯಾವುದೇ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯದ ಅಣಬೆ ಪರಿಣಿತರೊಬ್ಬರೊನ್ನೊಳಗೊಂಡ ತಂಡ ಘಟಕವನ್ನು ಮಾರ್ಗಸೂಚಿ ಅನ್ವಯ ಪರಿಶೀಲಿಸುವುದು.
8. ಇದನ್ನಾಧರಿಸಿ, ಸಹಾಯಧನ ಪ್ರಸ್ತಾವನೆಗೆ ಸಂಬಂಧಪಟ್ಟ ಅಧಿಕಾರಿಗಳು ಮಂಜೂರಾತಿ ನೀಡಿ, **ಡಿಸೆಂಬರ್ - 2023** ರ ಅಂತ್ಯದೊಳಗೆ ಫಲಾನುಭವಿ ಖಾತೆಗೆ ಸಹಾಯಧನ ಜಮೆಗೊಳಿಸುವುದು.
9. ಈ ಘಟಕದಲ್ಲಿ ಸಹಾಯಧನ ಪಡೆಯಲು NHM/NHB ಅಥವ ಸಂಘ ಸಂಸ್ಥೆ ಸರ್ಕಾರಿ ಮೂಲಗಳಿಂದ ಸಹಾಯಧನವನ್ನು ಪಡೆದಿಲ್ಲ ಎಂಬ ಮುಚ್ಚಳಿಕೆ ಪತ್ರವನ್ನು ಫಲಾನುಭವಿ ನೀಡುವುದು.

## VI. ಯೋಜನೆ ಅನುಷ್ಠಾನ ಉಸ್ತುವಾರಿ/ಮೇಲ್ವಿಚಾರಣೆ:

1. **ಅನುದಾನ ಮತ್ತು ಯೋಜನೆ ಅನುಷ್ಠಾನ ಅವಧಿ:** 2023-24ನೇ ಸಾಲಿನ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಸದರಿ ಕಾರ್ಯಕ್ರಮದ ಅನುಷ್ಠಾನಕ್ಕೆ ಅನುದಾನ ಕಲ್ಪಿಸಲಾಗಿದ್ದು, ಒಟ್ಟಾರೆ ರೂ.26.25 ಲಕ್ಷ ಅನುದಾನ ಲಭ್ಯವಾಗಲಿದೆ.
2. **ಯೋಜನೆ ಅನುಷ್ಠಾನ ಮತ್ತು ಉಸ್ತುವಾರಿ:** ಆಯಾ ಜಿಲ್ಲೆಗಳ ತೋಟಗಾರಿಕೆ ಉಪ ನಿರ್ದೇಶಕರುಗಳು ಯೋಜನೆ ಅನುಷ್ಠಾನಗೊಳಿಸುವ ಪೂರ್ಣ ಜವಾಬ್ದಾರಿ ಹೊಂದಿರುತ್ತಾರೆ. ವಿಭಾಗೀಯ ಜಂಟಿ ನಿರ್ದೇಶಕರುಗಳು ಆಯಾ ವಿಭಾಗದ ಜಿಲ್ಲೆಗಳ ಪ್ರಗತಿಯ ಮೇಲುಸ್ತುವಾರಿ ನಿರ್ವಹಿಸುವುದು.
3. **ದಾಖಲಾತಿಗಳ ನಿರ್ವಹಣೆ ಮತ್ತು ವರದಿ:**
   - **i.** ಅಣಬೆ ಘಟಕ ಸ್ಥಾಪಿಸಲು ಕೈಗೊಂಡ ಪ್ರಚಾರ ಕಾರ್ಯದ ದಾಖಲಾತಿಗಳು, ಪತ್ರ ವ್ಯವಹಾರದ ಪ್ರತಿಗಳು ಮತ್ತು ಪ್ರಕಟವಾದ ಪ್ರಚಾರ ಪ್ರಕಟಣೆಯ ಪ್ರತಿಗಳನ್ನು ಕಡತದಲ್ಲಿ ನಿರ್ವಹಿಸುವುದು.
   - **ii.** ಕಾಮಗಾರಿಯ /ಯಂತ್ರೋಪಕರಣ ಖರೀದಿ/ಅಳವಡಿಕೆಯ ಪ್ರತಿ ಹಂತದ ಛಾಯಾ ಚಿತ್ರಗಳನ್ನು (GPS) ದಾಖಲಿಸಿ ನಿರ್ವಹಿಸುವುದು.
   - **iii.** ಪ್ರತಿ ಮಾಹೆಯ ಪ್ರಗತಿ ವರದಿಯನ್ನು ಇ-ಮೇಲ್ ಮೂಲಕ ತಿಂಗಳ 2 ನೇ ದಿನಾಂಕದ ಒಳಗಾಗಿ ತಪ್ಪದೇ ನಿರ್ದೇಶನಾಲಯಕ್ಕೆ ಸಲ್ಲಿಸುವುದು.

     (Email: jaivikakendra.hulimavu@gmail.com and adhanabehulimavu@gmail.com)
   - **iv.** ಅಂತಿಮ ಪ್ರಗತಿ ವರದಿ, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನೆಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಹಾಗೂ ಮೌಲ್ಯಮಾಪನ ವರದಿ, ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯೊಂದಿಗೆ ತೋಟಗಾರಿಕೆ ಜಂಟಿ ನಿರ್ದೇಶಕರು (ಬಯೋಟೆಕ್ನಾಲಜಿ) ಜೈವಿಕ ಕೇಂದ್ರ, ಹುಳಿಮಾವು, ಬೆಂಗಳೂರು ರವರಿಗೆ ಕಳುಹಿಸುವುದು.

## VII. ಅಣಬೆ ಅಭಿವೃದ್ಧಿ ಯೋಜನೆಯ ಅನುಷ್ಠಾನದಿಂದ ನಿರೀಕ್ಷಿಸಲಾದ ಉಪಯೋಗಗಳು:

**ಅಣಬೆ ಉತ್ಪಾದನೆಯಲ್ಲಿ ದೇಶದ ಸ್ಥಿತಿಗತಿ**: ಅಣಬೆ ಪೌಷ್ಠಿಕಾಂಶವುಳ್ಳ ಆಹಾರವಾಗಿದ್ದು ಅಣಬೆ ಉತ್ಪಾದನೆ 1990 ರಿಂದ 2006 ರವರೆಗೆ ಗಣನೀಯವಾಗಿ ಏರಿಕೆಯಾಗಿರುತ್ತದೆ (5,000 ಟನ್ ರಿಂದ 1,00,000 ಟನ್ ಅನುಕ್ರಮವಾಗಿ). ಈ ನಿಟ್ಟಿನಲ್ಲಿ ಅಣಬೆಯಲ್ಲಿನ ಆರೋಗ್ಯಕರ ಪೌಷ್ಠಿಕಾಂಶಗಳು, ಆಹಾರ ಪದ್ಧತಿಯ ಬದಲಾವಣೆಗಳು ಮತ್ತು ವಿವಿಧ ಅಣಬೆ ತಳಿಗಳಿಂದ ಬೇಡಿಕೆ ಹೆಚ್ಚಾಗುತ್ತಿದೆ. ಪ್ರಸ್ತುತ ಭಾರತದಲ್ಲಿ ಅಣಬೆ ಉತ್ಪಾದನೆ ಸುಮಾರು 1.2 ಲಕ್ಷ ಟನ್ ಇದ್ದು, ಇದು ಉತ್ಪಾದನಾ ಬೇಡಿಕೆಗಿಂತ ತುಂಬಾ ಕಡಿಮೆ ಇರುತ್ತದೆ. ಭಾರತ ದೇಶದಲ್ಲಿ ಸುಮಾರು 700 ಮಿಲಿಯನ್ ಟನ್ ಗಳಷ್ಟು ಕೃಷಿ ತ್ಯಾಜ್ಯ ವಸ್ತುಗಳು ಪೋಲಾಗುತ್ತಿದೆ. ಈ ಪ್ರಮಾಣದಲ್ಲಿ ಶೇಕಡಾ 2 ರಷ್ಟು ತ್ಯಾಜ್ಯವನ್ನು ಅಣಬೆ ಉತ್ಪಾದನೆಯಲ್ಲಿ ಬಳಸಿಕೊಂಡರೆ ಸುಮಾರು 15 ಮಿಲಿಯನ್ ಟನ್ ಗಳ ಅಣಬೆ ಉತ್ಪಾದನೆಯನ್ನು ವಾರ್ಷಿಕವಾಗಿ ಬೆಳೆಸಬಹುದು (DMR, "Vision 2050").

ಭಾರತದಲ್ಲಿ ವಾರ್ಷಿಕ ತಲಾ ಸೇವನೆ ಸುಮಾರು 30 ರಿಂದ 40 ಗ್ರಾಂ ಆಗಿದ್ದು, ಇದು ಅಭಿವೃದ್ಧಿ ದೇಶಗಳಿಗೆ ಹೋಲಿಸಿದರೆ (4-5 ಕೆಜಿ) ತುಂಬಾ ಕಡಿಮೆ ಇರುತ್ತದೆ. ಇದಕ್ಕೆ ಮುಖ್ಯ ಕಾರಣ ಅಣಬೆ ಪೋಷಕಾಂಶ ಪ್ರಾಮುಖ್ಯತೆ ಬಗ್ಗೆ ಸಾಮಾನ್ಯ ಜನರಲ್ಲಿ ಹೆಚ್ಚಿನ ಅರಿವು ಇಲ್ಲದಿರುವುದು ಹಾಗೂ ಆಸಕ್ತ ಉತ್ಪಾದಕರಿಗೆ ಅಣಬೆ ಉತ್ಪಾದನೆಯ ತಾಂತ್ರಿಕತೆ ಮಾಹಿತಿ ದೊರೆಯದಿರುವುದು ಮತ್ತು ಗುಣಮಟ್ಟದ ಬೀಜದ ಕೊರತೆ.

**ಕರ್ನಾಟಕ ರಾಜ್ಯದ ಪರಿಸ್ಥಿತಿ:** ರಾಜ್ಯದಲ್ಲಿ ಸುಮಾರು 40 ರಿಂದ 60 ಟನ್ ಗಳ ಅಣಬೆ ಸ್ಪಾನ್ ಬಳಕೆಯಾಗುತ್ತಿದ್ದು, ಇದರಿಂದ ಅಂದಾಜು 150 - 200 ಟನ್ ಗಳ ಅಣಬೆ ಬೆಳೆ ಉತ್ಪಾದನೆಯಾಗುತ್ತಿದೆ.

## VIII. ಅಣಬೆ ಅಭಿವೃದ್ಧಿ ಯೋಜನೆಯ ಪರಿಣಾಮ:

2023-24 ನೇ ಸಾಲಿನಿಂದ ಇದು ನಿಧಾನವಾಗಿ ಸಾಮಾನ್ಯದೆಡೆಗೆ ಸಾಗುವ ನಿರೀಕ್ಷೆಯಿದೆ. ಈ ಸಾಲಿನಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ 15 ಘಟಕಗಳು ಅಣಬೆ ಉತ್ಪಾದನೆಯನ್ನು ಇನ್ನಷ್ಟು ಹೆಚ್ಚಿಸಲಿವೆ. ಖಾಸಗಿ ವಲಯದಲ್ಲಿ ಅಭಿವೃದ್ಧಿ ಪಡಿಸಲಾಗಿದ್ದು ಮೊದಲ ವರ್ಷದಲ್ಲಿ ಪ್ರತಿ ಘಟಕದಿಂದ 2000ಕೆ.ಜಿ (2ಟನ್) ವಾರ್ಷಿಕ ಅಣಬೆ ಉತ್ಪಾದನೆ ಪ್ರತಿ ಘಟಕದಿಂದ ದೊರೆಯಲಿದೆ. ಇದರ ಜೊತೆಗೆ, ಹೊಸದಾಗಿ ತರಬೇತಿ ಪಡೆದ ಅಭ್ಯರ್ಥಿಗಳು ಖಾಸಗಿ ವಲಯದಲ್ಲಿ ಸ್ವಇಚ್ಛೆಯಿಂದ ಹೊಸದಾಗಿ ಘಟಕ ಪ್ರಾರಂಭಿಸುವ ನಿರೀಕ್ಷೆ ಇದ್ದು, ಅಣಬೆ ಬೆಳೆ ಉತ್ಪಾದನೆ ಇನ್ನಷ್ಟು ಹೆಚ್ಚುಗೊಳ್ಳುವ ನಿರೀಕ್ಷೆ ಇದೆ. ಮುಂದುವರೆದು ಈ ಅಣಬೆ ಘಟಕಗಳಿಂದ ಫಲಾನುಭವಿಗಳಿಗೆ ಆರ್ಥಿಕ ಸ್ವಾವಲಂಬನೆಯನ್ನು ನೀಡುತ್ತದೆ ಜೊತೆಗೆ ಈ ಘಟಕಗಳಿಂದ ಉತ್ಪಾದನೆಯಾಗುವ ಅಣಬೆಗಳಿಂದ ಮಾರುಕಟ್ಟೆ ಪ್ರದೇಶದಲ್ಲಿ ಜನಸಾಮಾನ್ಯರಿಗೆ ಉತ್ತಮ ಪೋಷಕಾಂಶ ದೊರೆಯುತ್ತದೆ.

**ನಿರ್ದೇಶಕರು**

**ತೋಟಗಾರಿಕೆ ಇಲಾಖೆ**